# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-07**
**C.W.-13**

| | | |
|---|---|---|
| ಹೆಸರು | : | ಸತೀಶ್ ಆರ್. |
| ತಂದೆಯ ಹೆಸರು | : | ರಾಮಚಂದ್ರ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಫೋಟೋಗ್ರಾಫರ್ |
| ವಾಸಸ್ಥಳ | : | ಕೆಸರೇ, ಮೈಸೂರು |

**ದಿನಾಂಕಃ 26.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಕಳೆದ 20 ವರ್ಷಗಳಿಂದ ನಾನು ಫೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 12 ವರ್ಷಗಳಿಂದ ನನ್ನ ಸ್ವಂತ ಸ್ಟುಡಿಯೋವನ್ನು ಮೈಸೂರಿನ ಕಲ್ಪವೃಕ್ಷನಗರದಲ್ಲಿ ತೆರೆದು 'ವಿಷ್ಣು ಫೋಟೋಗ್ರಾಫಿ' ಎಂದು ಹೆಸರಿಟ್ಟಿದ್ದೇನೆ.

2. ಕೆಸರೇಯಿಂದ ನನ್ನ ಸ್ಟುಡಿಯೋ ಸುಮಾರು 700 ಮೀಟರ್ ದೂರವಾಗುತ್ತದೆ. ಮದುವೆ, ಹುಟ್ಟಿದ ಹಬ್ಬ, ಸಾವು, ಎಲ್ಲಾ ಕಾರ್ಯಕ್ರಮಗಳಿಗೂ ಹೋಗಿ ಫೋಟೋ ತೆಗೆಯುತ್ತೇನೆ.

3. ಮೈಸೂರಿನ ನರಸಿಂಹರಾಜ ಪೊ.ಠಾಣೆಯವರು ಫೋಟೋ ತೆಗೆಯಬೇಕಾದಂತಹ ಪ್ರಕರಣದಲ್ಲಿ ನನ್ನನ್ನು ಯಾವಾಗಲೂ ಕರೆಯುತ್ತಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನನ್ನು ನರಸಿಂಹರಾಜ ಪೊ.ಠಾಣೆಯವರು ದಿಃ15.12.2020 ರಂದು, ಕುರಿಮಂಡಿಯ ಕ್ವಾಟ್ರಸ್ ನಲ್ಲಿ ಕೊಲೆಯಾಗಿದೆ, ಬಂದು ಫೋಟೋ ತೆಗೆಯಬೇಕೆಂದು ಹೇಳಿದ್ದರು. ನಂತರ ನಾನು ಕುರಿಮಂಡಿಯ ಕ್ವಾಟ್ರಸ್ ಗೆ ಹೋದೆ. ಆ ಕ್ವಾಟ್ರಸಿನ ಒಂದು ಮಹಡಿ ಮನೆಯಲ್ಲಿ ಒಬ್ಬ ಹುಡುಗನ ಶವವಿತ್ತು. ಪೊಲೀಸರು ಹೇಳಿದಂತೆ ನಾನು ಆ ಶವದ ಫೋಟೋಗಳನ್ನು ತೆಗೆದಿರುತ್ತೇನೆ. ಶವದ ಸುತ್ತಮುತ್ತಲಿನ ಜಾಗ ಮತ್ತು ಆ ಶವವಿದ್ದ ರೂಮಿನ ಪೂರ್ತಿ ಜಾಗ ಮತ್ತು ವಸ್ತುಗಳ ಫೋಟೋಗಳನ್ನು ತೆಗೆದೆ. ನನ್ನ ಕ್ಯಾಮೆರಾ Nikon D70 ಯಲ್ಲಿ ಆ ಫೋಟೋಗಳನ್ನು ತೆಗೆದಿರುತ್ತೇನೆ. ಆ ಸ್ಥಳಕ್ಕೆ ನಾನು ಮಧ್ಯಾಹ್ನ 12.15 ರಿಂದ

12.30 ರ ಸಮಯಕ್ಕೆ ಹೋಗಿದ್ದೆ. ಅನೇಕ ಪೊಲೀಸ್ ಅಧಿಕಾರಿಗಳು ಬಂದು ಹೋಗಿದ್ದರು. ಮಧ್ಯಾಹ್ನ 2.15 ರ ಸಮಯಕ್ಕೆ ವಾಪಸ್ಸು ಅಲ್ಲಿಂದ ಬಂದೆ.

4. ನಂತರ ನಾನು ತೆಗೆದಿರಿಸಿದ್ದ ಕ್ಯಾಮೆರಾದಲ್ಲಿದ್ದ ಫೋಟೋಗಳನ್ನು ನನ್ನ ಸಿಸ್ಟಮ್ ಗೆ ಕಾಪಿ ಮಾಡಿಕೊಂಡೆ. ಪೊಲೀಸರು ಫೋಟೋಗಳನ್ನು ಕೇಳಿದಾಗ, ನಾನು ಅವುಗಳ ಪ್ರಿಂಟ್ ಹಾಕಿ ಡಿವಿಡಿಗೆ ಲೋಡ್ ಮಾಡಿ ಕೊಟ್ಟಿರುತ್ತೇನೆ. ಆ ಫೋಟೋಗಳನ್ನು ನಾನು ಗುರುತಿಸುತ್ತೇನೆ. ಈಗ ನೋಡುತ್ತಿರುವ ನಿಪಿ–2 ರಿಂದ 13 ರವರೆಗಿನ ಫೋಟೋಗಳನ್ನು ನಾನು ತೆಗೆದಿರುತ್ತೇನೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

5. ಈಗ ನೋಡುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಕಲಂ 65B ಭಾರತೀಯ ಸಾಕ್ಷ್ಯ ಅಧಿನಿಯಮದ ಅಡಿಯಲ್ಲಿ ಸಲ್ಲಿಸಿರುವ ಪ್ರಮಾಣಪತ್ರವಾಗಿದ್ದು. ಅದನ್ನು ನಿಪಿ–21 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ–21(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ನಾನು ಫೋಟೋ ತೆಗೆದಿರುವ ಬಾಬ್ತು ಈ ದಾಖಲಾತಿಯನ್ನು ನೀಡಿರುತ್ತೇನೆ.

**<u>ಪಾಟೀಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ–</u>**

6. ನಾನು ಪಿಯುಸಿವರೆಗೂ ಓದಿರುತ್ತೇನೆ. ನಾನು ಫೋಟೋಗ್ರಾಫಿಯ ಬಗ್ಗೆ ಯಾವುದೇ ತರಬೇತಿ ಅಥವಾ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಎನ್.ಆರ್.ಪೊ.ಠಾಣೆಯ ಕಾರ್ಯ ವ್ಯಾಪ್ತಿಯಲ್ಲಿ ಇನ್ನು ಬೇರೆ ಬೇರೆ ಸ್ಟುಡಿಯೋಗಳು ಇವೆ. ಪೊಲೀಸರಲ್ಲದೇ ಬೇರೆಯವರು ಸಹ ಫೋಟೋ ತೆಗೆಯಲು ನನ್ನನ್ನು ಕರೆಸುತ್ತಾರೆ. ಫೋಟೋ ತೆಗೆದು ಅವುಗಳ ಕಾಪಿ ಕೊಡುವಾಗ ಬಿಲ್ಲನ್ನು ಕೊಡುತ್ತೇನೆ. ನನ್ನಲ್ಲಿರುವ Nikon D70 ಯ ಮೂಲಕ ಫೋಟೋ ತೆಗೆದಾಗ, ಅದು ಮೆಮೊರಿ ಕಾರ್ಡಿನಲ್ಲಿ ಸೇವ್ ಆಗುತ್ತದೆ. ನಂತರ ಮೆಮೊರಿ ಕಾರ್ಡನ್ನು ಹೊರಗೆ ತೆಗೆದು ಪ್ರಿಂಟ್ ಹಾಕುತ್ತೇನೆ ಎನ್ನುವುದು ಸರಿ.

7. ದಿಃ15.12.2020 ರಂದು ಆ ಬಡಾವಣೆಯಲ್ಲಿರುವ ಫೋನು ಮಾಡಿ ಇನ್ಸ್ ಪೆಕ್ಟರ್ ರವರು ಫೋಟೋ ತೆಗೆಯಲು ಕರೆಯುತ್ತಿದ್ದಾರೆ, ಬನ್ನಿ, ಎಂದು ತಿಳಿಸಿದರು. ಫೋನು ಮಾಡಿದವರ ಹೆಸರು ನೆನಪಿಲ್ಲ. ಫೋನು ಮಾಡಿದಾಗ, ಒಬ್ಬ ಹುಡುಗ ಸತ್ತು ಹೋಗಿದ್ದಾನೆ ಎಂದು ಸಹ ತಿಳಿಸಿದ್ದರು.

8. ಆ ಸಮಯದಲ್ಲಿ ನಾನು ಯಾವ ಕಂಪನಿಯ ಚಿಪ್ಪನ್ನು ಉಪಯೋಗಿಸುತ್ತಿದ್ದೆ ಎನ್ನುವುದನ್ನು ಮರೆತಿದ್ದೇನೆ. ಏಕೆಂದರೆ, ಚಿಪ್ಪನ್ನು ಆಗಾಗ್ಗೆ ಬದಲಾಯಿಸುತ್ತಿರುತ್ತೇನೆ. ಆ ಸ್ಥಳದಲ್ಲಿ ನಾನು ಸುಮಾರು 40 ಫೋಟೋಗಳನ್ನು ತೆಗೆದಿದ್ದೆ. ನಾನು ಆ 40 ಫೋಟೋಗಳ ಪ್ರಿಂಟ್ ಹಾಕಿದ್ದೆ. ನಾನು ಫೋಟೋ ತೆಗೆಯುವಾಗ ಅಲ್ಲಿ ಯಾರು ಯಾರು ಇದ್ದರು ಎನ್ನುವುದು ನನಗೀಗ ನೆನಪಿಲ್ಲ. ಫೋಟೋ ತೆಗೆದ ಒಂದು ತಿಂಗಳೊಳಗೆ ಪ್ರಿಂಟ್ ಹಾಕಿ ಕೊಟ್ಟಿದ್ದೇನೆ, ಆದರೆ ದಿನಾಂಕದ ನೆನಪಿಲ್ಲ. ಈ ಬಗ್ಗೆ ಬಿಲ್ಲನ್ನು ಪೊ.ಠಾಣೆಗೆ ನೀಡಿಲ್ಲ. ಸುಮಾರು ಒಂದು ತಿಂಗಳ ಕಾಲ ಆ ಚಿಪ್ಪು ನನ್ನಲ್ಲಿಯೇ ಇತ್ತು.

9. ಫೋಟೋದಲ್ಲಿ ಏನಾದರೂ ಬದಲಾವಣೆ ಅಂದರೆ ಎಡಿಟ್ ಮಾಡಿದ್ದಲ್ಲಿ, ಯಾವಾಗ ಅದನ್ನು ಎಡಿಟ್ ಮಾಡಿರುತ್ತೇವೆಯೋ ಆ ದಿನಾಂಕ ಮತ್ತು ಸಮಯ ಅದರಲ್ಲಿ, ಅಂದರೆ ಡಿವಿಡಿಯಲ್ಲಿ ನಮೂದಾಗಿರುತ್ತದೆ. ಇಲ್ಲವಾದರೇ, ಅಸಲು ಫೋಟೋಗಳನ್ನು ಯಾವಾಗ ತೆಗೆದಿರುತ್ತೇವೆಯೋ, ಆ ದಿನದ ದಿನಾಂಕ ಮತ್ತು ಸಮಯ ಹಾಗೆಯೇ ಡಿವಿಡಿಯಲ್ಲಿ ಇರುತ್ತದೆ. ಈಗ ನೋಡುತ್ತಿರುವ ನ್ಯಾಯಾಲಯದ ಮುಂದಿರುವ ನಿಪಿ-2 ರಿಂದ 12 ಫೋಟೋಗಳಲ್ಲಿ, ದಿನಾಂಕ ಮತ್ತು ಸಮಯದ ನಮೂದು ಇರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಡಿವಿಡಿಯಲ್ಲಿ ಈ ಬಗ್ಗೆ ನಮೂದು ಇರುತ್ತದೆ. ನಾನು ಪ್ರಿಂಟ್ ಹಾಕಿದ ಎಲ್ಲಾ 40 ಫೋಟೋಗಳನ್ನು ಪೊ.ಠಾಣೆಗೆ ಕೊಟ್ಟಿರುತ್ತೇನೆ. ನಾನು ಚಿಪ್ಪನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಫೋಟೋಗಳನ್ನು ಡಿವಿಡಿಗೆ ಡೌನ್ ಲೋಡ್ ಮಾಡಿದ ದಿನಾಂಕದ ನೆನಪು ನನಗೆ ಈಗ ಇಲ್ಲ. ಆ ರೀತಿ ಡೌನ್ ಲೋಡ್ ಮಾಡುವಾಗ ನನ್ನ ಜೊತೆಯಲ್ಲಿ ಯಾವ ಪೊಲೀಸರು ಇರಲಿಲ್ಲ.

10. ನಾನು ಪೊಲೀಸರಿಗೆ ಯಾವ ದಿನಾಂಕದಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎನ್ನುವುದನ್ನು ಮರೆತಿದ್ದೇನೆ. ನಿಪಿ-21 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು, ನೀನು ಫೋಟೋ ತೆಗೆದಿದ್ದೀಯಾ ಆದ್ದರಿಂದ ಸಹಿ ಹಾಕು ಎಂದರು. ಹೀಗಾಗಿ ಸಹಿ ಹಾಕಿರುತ್ತೇನೆ.

**SC.No.93/2021**
**P.W.-07**
**C.W.-13**

11. ಆ ಶವ ಇದ್ದ ರೂಮಿನಲ್ಲಿದ್ದಂತಹ ವಸ್ತುಗಳ ಬಾಬ್ತು ಫೋಟೋ ತೆಗೆದಿದ್ದೇನೆ. ಆದರೆ ಪ್ರತಿಯೊಂದು ವಸ್ತುವಿನ ಪ್ರತ್ಯೇಕ ಫೋಟೋವನ್ನು ತೆಗೆದಿರುವುದಿಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಮೇಲ್ಕಂಡ ಪಾಟೀಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.